**ಅಸಲು ದಾವ ಸಂಖ್ಯೆಃ 1313/2022**
**ಪಿ.ಡಬ್ಲೂ -1**

**ದಿಃ 28-04-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**
**ಪಾಟೀ ಸವಾಲು ಪ್ರತಿವಾದಿ ಪರ ವಕೀಲರಾದ ಶ್ರೀ ಎಸ್ ಪಿ ಕೆ ರವರಿಂದಃ-**

1. ನಾನು ವ್ಯಾಪಾರಸ್ಥನಾಗಿರುತ್ತೇನೆ. ನಾನು Diploma in engineering ವ್ಯಾಸಾಂಗ ಮಾಡಿರುತ್ತೇನೆ. ಪ್ರಸ್ತುತ ದಾವೆ ಹೂಡಲು ವಕೀಲರಿಗೆ ನಾನೇ ಮಾಹಿತಿ ನೀಡಿರುತ್ತೇನೆ. ಈ ದಾವೆಯಲ್ಲಿ ಹಾಜರು ಮಾಡಿರುವ ದಾಖಲೆಗಳನ್ನು ನಾನು ನೋಡಿರುತ್ತೇನೆ.

2. ನನ್ನ ತಂದೆಯ ಹೆಸರು ಅಜಿತ ತಾತಪ್ಪ ಶೇರಿ. ನನ್ನ ತಂದೆ ಹಾಗೂ ಪ್ರತಿವಾದಿ ಅಣ್ಣ ತಮ್ಮಂದಿರು ಎಂದರೆ ಸರಿ. ಸದರಿ ತಾತಪ್ಪ ಶೇರಿರವರು ತಾನಾಜಿ ಗಲ್ಲಿಯ ಸಿ ಟಿ ಎಸ್ ನಂಬರ 4905/24A, ಮುನಸಿಪಲ್ ಮನೆ ನಂಬರ 90/1 ರ ಮಾಲೀಕರಾಗಿದ್ದರು ಎಂದರೆ ಸರಿ. ಸದರಿ ತಾತಪ್ಪ ಶೇರಿರವರು ದಿನಾಂಕಃ 01-06-1987 ರಲ್ಲಿ ಒಂದು ಮರಣ ಶಾಸನವನ್ನು ಬರೆದಿದ್ದರು ಹಾಗೂ ಸದರಿ ಮರಣ ಶಾಸನ ದಿನಾಂಕಃ 04-061987 ರಂದು ನೋಂದಾಯಿತಗೊಂಡಿತ್ತು ಎಂದರೆ ಸರಿ. ಸದರಿ ಮೃತ್ಯು ಪತ್ರವನ್ನು ನಾನು ಓದಿ ನೋಡಿರುತ್ತೇನೆ. ಸದರಿ ಮೃತ್ಯು ಪತ್ರ ಪ್ರಕರಾರ ನನ್ನ ಅಜ್ಜ ತಾತಪ್ಪ ಶೇರಿರವರು ಸಿ ಟಿ ಎಸ್ ನಂಬರ 4905/24A, ರಲ್ಲಿ ನನ್ನ ತಂದೆ ಹಾಗೂ ಪ್ರತಿವಾದಿಯವರಿಗೆ ವಿಭಾಗ ಮಾಡಿ ಅವರವರ ಪಾಲು ಪ್ರತ್ಯೇಕ ಮಾಡಿಕೊಟ್ಟಿದ್ದರು ಎಂದರೆ ಸರಿ. ನನ್ನ ಅಜ್ಜ ತಾತಪ್ಪ ಶೇರಿರವರು ಸದರಿ ಮೃತ್ಯು ಪತ್ರ ಮಾಡಿದ ಸುಮಾರು 1-2 ವರ್ಷಗಳ ನಂತರ ಮರಣ ಹೊಂದಿರುತ್ತಾರೆ. ನನ್ನ ಅಜ್ಜ ತೀರಿಕೊಂಡ ನಂತರ ಸಿ ಟಿ ಎಸ್ ನಂಬರ 4905/24A, ರಲ್ಲಿ ಸದರಿ ಮೃತ್ಯು ಪತ್ರದ ಪ್ರಕಾರ ವಿಭಾಗ ಮಾಡಿಕೊಂಡು ನನ್ನ ತಂದೆ ಹಾಗೂ ಪ್ರತಿವಾದಿ ಅವರವರ ಹೆಸರುಗಳನ್ನು ಅವರ ಪಾಲಿನ ಹಿಸ್ಸೆಗಳಿಗೆ ಪಡೆದು ಅದರಂತೆ ಸಿ ಟಿ ಎಸ್ ಉತಾರಗಳನ್ನು ಪಡೆದಿರುತ್ತಾರೆ ಎಂದರೆ ಸರಿ. ಆ ರೀತಿ ಹಿಸ್ಸೆ ಆದ ನಂತರ ಅಂದಿನಿಂದ ನನ್ನ ತಂದೆ ಹಾಗೂ ಪ್ರತಿವಾದಿ ಅವರ ಹಿಸ್ಸೆಗೆ ಕುರಿತಂತೆ ಆಸ್ತಿ ತೆರಿಗೆಯನ್ನು ಪ್ರತ್ಯೇಕವಾಗಿ ಕಟ್ಟುತ್ತಾ

ಬಂದಿರುತ್ತಾರೆ ಎಂದರೆ ಸರಿ. ನನ್ನ ತಂದೆ ಅಜಿತರವರು ದಿನಾಂಕಃ 02-08-2006 ರಂದು ಮರಣ ಹೊಂದಿರುತ್ತಾರೆ ಎಂದರೆ ಸರಿ. ನನ್ನ ತಂದೆಯ ಮರಣ ಪ್ರಮಾಣ ಪತ್ರವನ್ನು ನ್ಯಾಯಾಲಯಲಕ್ಕೆ ಹಾಜರು ಪಡೆಸಲು ನನಗೆ ತೊಂದರೆ ಇರುವುದಿಲ್ಲ. ನನ್ನ ತಂದೆ ಜೀವಿತ ಅವಧಿಯಲ್ಲಿ ದಾವಾ ಆಸ್ತಿಗೆ ಸಂಬಂಧಪಟ್ಟಂತೆ ಅವರು ಪ್ರತಿವಾದಿಯ ವಿರುದ್ದ ಯಾವುದೇ ದಾವೆ ಹೂಡಿರಲಿಲ್ಲ ಎಂದರೆ ಸರಿ. ನನ್ನ ತಂದೆ ಜೀವಂತ ಇರುವ ತನಕ ಪ್ರತಿವಾದಿಯು ಅವರ ಪಾಲಿನ ಹಿಸ್ಸೆಯನ್ನು ಮಾರಾಟ ಮಾಡಬೇಕಾದರೆ ನನ್ನ ತಂದೆಗೆ ಮೊದಲ ಆದ್ಯತೆ ನೀಡಬೇಕೆಂದು ನನ್ನ ತಂದೆ ಎಂದಿಗೂ ಪ್ರತಿವಾದಿಗೆ ಕೇಳಿಕೊಂಡಿರಲಿಲ್ಲ ಎಂದರೆ ಸರಿ.

**ಈ ಹಂತದಲ್ಲಿ ಮುಂದುವರೆದ ಸಾಕ್ಷಿಯ ಪಾಟೀ ಸವಾಲಿಗೆ ಸಮಯವಕಾಶ ಕೋರಿದ್ದು ನೀಡಲಾಯಿತು.**

**(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ.ಹೇ.ಕೇ ಸರಿಯಿದೆ.**

Sd/-

**ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಧೀಶರು,**

**ಬೆಳಗಾವಿ.**